ತುಮಕೂರು ಜಿಲ್ಲೆಯಲ್ಲಿ ಸ್ಥಾಪಿಸುವ ಸಣ್ಣ ಕೈಗಾರಿಕೆಗಳಿಗೆ ಕೊಡುತ್ತಿರುವ ಸಹಾಯ ಧನ.

೩೩. ಶ್ರೀ ಬಿ. ಬೈರಪ್ಪಾಜಿ (ತುರುವೇಕೆರೆ).—ಮಾನ್ಯ ಕೈಗಾರಿಕಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳನ್ನು ಉತ್ತರಿಸುವರೇ ?

ಅ) ತುಮಕೂರು ಜಿಲ್ಲೆಯಲ್ಲಿ ಸ್ಥಾಪಿಸುವ ಸಣ್ಣ ಕೈಗಾರಿಕೆಗಳಿಗೆ ಕೊಡುತ್ತಿರುವ ಸಹಾಯ ಧನ ಎಷ್ಟು ?

ಆ) ಈ ಸಹಾಯಧನದ ಪ್ರಮಾಣದಲ್ಲಿ ತಾಲ್ಲೂಕಿನಿಂದ ತಾಲ್ಲೂಕಿಗೆ ವ್ಯತ್ಯಾಸವಿದೆ ಎಂಬುದು ಸರ್ಕಾರದವರ ಗಮನಕ್ಕೆ ಬಂದಿರುವುದೆ ;

ಇ) ಹಾಗಿದ್ದಲ್ಲಿ ಇದಕ್ಕೆ ಕಾರಣಗಳೇನು ,

ಈ) ಪ್ರತಿಯೊಂದು ತಾಲ್ಲೂಕುಗಳಿಗೂ ಏಕ ರೀತಿಯಲ್ಲಿ ಸಹಾಯ ಧನವನ್ನು ಕೊಡಲು ಸರ್ಕಾರದವರು ಏರ್ಪಾಡು ಮಾಡುವರೇ ?

ಶ್ರೀ ಎಸ್. ಆರ್. ಬೊಮ್ಮಾಯಿ (ಕೈಗಾರಿಕಾ ಮಂತ್ರಿಗಳು).—

(ಅ) ವಲಯ ೨ರಲ್ಲಿರುವ ಸಣ್ಣ ಕೈಗಾರಿಕೆಗಳಿಗೆ ರೂ. ೫ ಲಕ್ಷ ಗರಿಷ್ಟ ಮಿತಿ ಇರುವಂತೆ ಕೈಗಾರಿಕೆ ಘಟಕದ ಸ್ಥಿರಾಸ್ತಿ ಬೆಲೆಯ ಬಂಡವಾಳ ಹೂಡಿಕೆ ಶೇಕಡಾ ೧೦ರಷ್ಟು ರಾಜ್ಯ ಸರಕಾರದ ಸಹಾಯ ಧನ ನೀಡುವುದು.

ವಲಯ ೩ ಏಳಂವರೆ ಲಕ್ಷ ರೂಪಾಯಿ ಗರಿಷ್ಟ ಮಿತಿ ಇರುವಂತೆ ಕೈಗಾರಿಕೆ ಘಟಕದ ಸ್ಥಿರಾಸ್ತಿ ಬಂಡವಾಳ ಹೂಡಿಕೆ ಬೆಲೆಯ ಶೇ. ೧೫ರಷ್ಟು ರಾಜ್ಯ ಸರ್ಕಾರದ ಸಹಾಯಧನ ನೀಡುವುದು.

(ಆ) ಗೊತ್ತಿದೆ.

(ಇ) ರಾಜ್ಯವನ್ನು ಕೈಗಾರಿಕಾ ಅಭಿವೃದ್ಧಿಗೋಸ್ಕರವಾಗಿ ೪ ವಲಯಗಳಾಗಿ ವಿಭಾಗಿಸಲಾಗಿದೆ.

(ಈ) ಇಲ್ಲ.

೩ ತಿಂಗಳು. ೪ ತಿಂಗಳು ಹಾಗೂ ಒಂದು ತಿಂಗಳು ಹೀಗೆ ಸ್ಥಳೀಯರ ಒತ್ತಡದ ಮೇಲೂ ಕೆಲವರನ್ನು ಮಾಡಿದ್ದಾರೆ. ಅಂತಹವರಲ್ಲಿ ಕೆಲವರನ್ನು ರಿಟ್ರೆಂಚ್ ಮಾಡಿದ್ದಾರೆ. ಕೆಲಸದಿಂದ ಈಗಾಗಲೇ ತೆಗೆದು ಹಾಕಿರುವವರನ್ನು ಪುನಃ ವಾಪಸ್ಸು ತೆಗೆದುಕೊಳ್ಳುವುದಕ್ಕೆ ಕಷ್ಟವಾಗುತ್ತದೆ. ಆದರೆ ಇವರನ್ನೆಲ್ಲಾ ಸರ್ಕಾರಿ ಆದೇಶದ ಪ್ರಕಾರ ರಿಟ್ರೆಂಚ್ ಮಾಡಿದ್ದಾರೆ. ಒಂದು ವೇಳೆ ಬ್ಯಾಕ್ ಆರ್ಡರ್ ತರುವುದಕ್ಕೆ ಹಿಂದೆ ಕೆಲಸಕ್ಕೆ ಸೇರಿದ್ದು ಇತ್ತೀಚೆಗೆ ತೆಗೆದು ಹಾಕಿದ್ದರೆ ಅಂತಹ ಕೇಸುಗಳನ್ನು ಪ್ರತ್ಯೇಕವಾಗಿ ಪರಿಶೀಲಿಸುವಂತೆ ಅಧಿಕಾರಿಗಳಿಗೆ ಸೂಚನೆ ನೀಡುತ್ತೇನೆ.

ಪ್ರಶ್ನೋತ್ತರ ವೇಳೆ ಮುಗಿಯಿತು.

ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೆಗಳು

46 ವಿಷಯ.—ಸಿ.ಎನ್. ಹಳ್ಳಿ ತಾಲ್ಲೂಕು, ಕಂಡೀಕೆರೆ ಹೋಬಳಿ ಸಂದಿನಹಳ್ಳಿ ನೀರಾವರಿ ಪಿಕಅಪ್ ಹಂತದ ಕುರಿತಾಗಿ

೩೮ (೭) ಶ್ರೀ ಬಿ. ಗಂಗಣ್ಣ (ಕಳ್ಳಂಬೆಳ್ಳ).—ಮಾನ್ಯ ಸಣ್ಣ ನೀರಾವರಿ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಸಿ. ಎನ್. ಹಳ್ಳಿ ತಾಲ್ಲೂಕು ಕಂಡೀಕೆರೆ ಹೋಬಳಿ, ಸಿಂಗದಹಳ್ಳಿ ಹತ್ತಿರವಿರುವ ಸಂದಿನಹಳ್ಳಿ ನೀರಾವರಿ ಪಿಕ್‌ಅಪ್ ಕೆಲಸವು ಯಾವ ಹಂತದಲ್ಲಿದೆ.

ಶ್ರೀ ಆರ್. ಎನ್. ಲಕ್ಷ್ಮೀಪತಿ (ಸಣ್ಣ ನೀರಾವರಿ ರಾಜ್ಯ ಸಚಿವರು).—

ಪಿ. ಎನ್. ಹಳ್ಳಿ ತಾಲ್ಲೂಕು ಕಂಡೀಕೆರೆ ಹೋಬಳಿ, ಸಿಂಗದಹಳ್ಳಿ ಹತ್ತಿರವಿರುವ ಸಂದಿನಹಳ್ಳ ನೀರಾವರಿ ಪಿಕ್‌ಅಪ್‌ದ ಕುರಿತಾಗಿ ಯಾವ ಪ್ರಸ್ತಾವನೆಯೂ ಇಲ್ಲ. ಕಾರಣ ಈ ಕೆಲಸದ ಹಂತದ ಪ್ರಶ್ನೆ ಉದ್ಭವಿಸುವುದಿಲ್ಲ.

ಮಂನವಿಗಳು

(i) ಬೆಂಗಳೂರು ದೂರದರ್ಶನ ಮರುಪ್ರಸಾರದಲ್ಲಿ ಉಂಟಾದ ಅಡಚಣೆಯ ಬಗ್ಗೆ.

ಶ್ರೀ ಗೋವಿಂದ ಪಿ. ಒಡೆಯರಾಜ್.—ನಿನ್ನೆ ನಮ್ಮ ರಾಷ್ಟ್ರದಲ್ಲಿ ಸ್ವಾತಂತ್ರ್ಯ ದಿನಾಚರಣೆಯನ್ನು ಆಚರಿಸಲಾಯಿತು. ಈ ಒಂದು ಸ್ವಾತಂತ್ರ್ಯ ದಿನಾಚರಣೆಯನ್ನು ಮಾಡುವಾಗ ಕೆಂಪು ಕೋಟೆಯಲ್ಲಿ ಪ್ರಧಾನ ಮಂತ್ರಿಗಳು ರಾಷ್ಟ್ರವನ್ನುದ್ದೇಶಿಸಿ ಭಾಷಣ ಮಾಡಿದರು. ಆ ಭಾಷಣ ರಾಜ್ಯದಲ್ಲಿರುವ ಟಿಲಿವಿಜನ್‌ನಲ್ಲಿ ಮರುಪ್ರಸಾರವಾಗಬೇಕಾಗಿತ್ತು. ಆದರೆ ಆ ಒಂದು ಮರುಪ್ರಸಾರವಾಗುವುದಕ್ಕೆ ಅಡ್ಡಿಯಂನ್ನುಂಟು ಮಾಡಿದ್ದಾರೆ. ಇದು ರಾಷ್ಟ್ರದ ಕಾರ್ಯಕ್ರಮಂಕ್ಕೆ ತಡೆಯನ್ನುಂಟಂ ಮಾಡಿರುವುದರಿಂದ ನಾವು ಇದನ್ನು ಪ್ರಶ್ನೆ ಮಾಡಬೇಕಾಗಿದೆ. ಇದು ಬಹಳ ವಿಷಾದದ ಸಂಗತಿ ಎಂಬುದಾಗಿ ನಾನು ಹೇಳಬೇಕಾಗಿದೆ. ಏಕೆಂದರೆ ಕನ್ನಡಿಗರು ದುರಭಿಮಾನಿಗಳಲ್ಲ. ಕನ್ನಡಿಗರು ದೇಶ ಪ್ರೇಮಿಂಗಳು, ದೇಶಕ್ಕಾಗಿ ತ್ಯಾಗ ಮಾಡತಕ್ಕಂತಹ ಜನ. ರಾಷ್ಟ್ರದ ಕಾರ್ಯಕ್ರಮಕ್ಕೆ ಅಡ್ಡಿಯನ್ನುಂಟು ಮಾಡುವುದು ಸಾಧುವಾದುದಲ್ಲ ಇದು ಅತ್ಯಂತ ವಿಷಾದದ ಸಂಗತಿ ಎಂಬುದಾಗಿ ನಾನು ಹೇಳಬೇಕಾಗುತ್ತದೆ.

ಶ್ರೀ ಪಿ. ರಾಮದೇವ್.—ಇದು ಸರಿಯಲ್ಲ.

ಶ್ರೀ ಗೋವಿಂದ ಪಿ. ಒಡೆಯರಾಜ್.—ರಾಷ್ಟ್ರೀಯ ಕಾರ್ಯಕ್ರಮ ನಡೆಯಬೇಕಾದರೆ ಅದಕ್ಕೆ ಅಡ್ಡಿಯನ್ನುಂಟು ಮಾಡುವುದನ್ನು ದೇಶದ ಹಿತದೃಷ್ಟಿಯಿಂದ ಎಲ್ಲರೂ ಅಂತಹ ಕೃತ್ಯವನ್ನು ತಡೆಯಬೇಕಾಗುತ್ತದೆ. ಈ ಒಂದು ಕೃತ್ಯವನ್ನು ತಡೆಹಿಡಿಯಬೇಪದರಲ್ಲಿ ಸರ್ಕಾರದ ವಿಫಲತೆಯನ್ನು ಸದಸದ ಗಮನಕ್ಕೆ ತರಬೇಕಾಗುತ್ತದೆ. ಇದು ಪೋಲೀಸ್‌ನವರಿಗೆ ಗೊತ್ತಿತ್ತು. ನಮ್ಮ ಕನ್ನಡದ ಅಭಿಮಾನಿಗಳು ಬಹಳ ಬುದ್ಧಿವಂತರು. ಪೋಲೀಸಿನವರಿಗೆ ಈ ಒಂದು ಕೃತ್ಯ ನಡೆಯುವುದು ಗೊತ್ತಿದ್ದರೂ ಸಹ ಏಕೆ ಪೋಲೀಸಿನವರು ಕ್ರಮ ಕೈಗೊಳ್ಳಲಿಲ್ಲ ? ಇದು ಪೋಲೀಸಿನವರ ವೈಫಲ್ಯತೆ.

ಶ್ರೀ ಪಿ. ರಾಮದೇವ್.—ಎಷ್ಟು ಸಾರಿ ಕೇಂದ್ರದವರನ್ನು ಅಂಗಲಾಚಿ ಕೇಳಿಕೊಳ್ಳಬೇಕಂ, ಸಮಗೆ ಬೇಕಾದ್ದು ಕನ್ನಡದಲ್ಲಿ ಕಾರ್ಯಕ್ರಮ ಆಗಬೇಕು.

ಶ್ರೀ ಗೋವಿಂದ ಪಿ. ಒಡೆಯರಾಜ್.— ರಾಷ್ಟ್ರೀಯ ಕಾರ್ಯಕ್ರಮವನ್ನು ತಡೆಯನ್ನುಂಟು ಮಾಡುವುದು ಸರಿಯಾದುದಲ್ಲ.

ಅಧ್ಯಕ್ಷರು.—ತಾವು ನೋಟೀಸ್ ಕೊಡಿ. ಆಮೇಲೆ ವಿಚಾರ ನೋಡೋಣ.

ಶ್ರೀ ಎಂ. ವೀರಪ್ಪಮೊಯ್ಲಿ.—ಇಲ್ಲಿಗೆ ನಿಲ್ಲಿಸಿ ಬಿಡುತ್ತೀರಾ ?

ಅಧ್ಯಕ್ಷರು.—ಕಾಗದವನ್ನೂ ಬರೆಯದೆ ಸುಮ್ಮನೆ ಮಾತನಾಡುತ್ತಾ ಹೋದರೆ ಹೇಗೆ?

ಶ್ರೀ ಎಂ. ವೀರಪ್ಪಮೊಯ್ಲಿ.—ಇದಕ್ಕೂ ತಾವು ಫಾರ್ಮಾಲಿಟೀಸ್‌ನ್ನು ಆಪ್ಲೈ ಮಾಡಿದರೆ ಸರಿ ಕಾಣುವುದಿಲ್ಲ. ಇದು ಬಹಳ ಗಂಭೀರವಾದ ಪ್ರಶ್ನೆ. ಈ ರಾಜ್ಯದಲ್ಲಿ ಏನಾಗುತ್ತಿದೆ ಎಂಬುದನ್ನು ನೋಡಬೇಕಾಗಿದೆ. ಸದನದ ಹೊರಗೆ ನಡೆಯುತ್ತಿರತಕ್ಕಂತಹ ಕಾರ್ಯಕ್ರಮ ಇದು. ಈ ಕಾರ್ಯಕ್ರಮ ನಡೆಯಬೇ6ದರೂ ಗಂಭೀರವಾದ ಪರಿಸ್ಥಿತಿ ಉದ್ಭವಿಸಿರುವಾಗ ಸಣ್ಣ ಸಣ್ಣ ವಿಚಾರದಲ್ಲೂ ಪ್ರತ್ಯೇಕತೆಯನ್ನು ಮಂದುವರಿಸಿಕೊಂಡು ಹೋಗುವ ಸೂಚನೆಯನ್ನು ರಾಜ್ಯದಲ್ಲಿ ಇವತ್ತು ನಾವು